

ಡಾ. ಎಲಿಜಬೆತ್ ಸೂಬರ್ಗ್ಮನ್

ಹುಡುಕತೊಡಗಿದೆ. ಅಮೆರಿಕದ 'ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್'ನಲ್ಲಿ ದಾಖಲಾಗಿರುವ ಡಾ. ಲೀ ಎಮ್ ಜೇಮ್ಸ್ ಮತ್ತು ಡಾ. ಕೆವಿನ್ ಕಾರ್ನಿಯೋ ಅವರ ಒಂದು ಕೇಸ್ ರಿಪೋರ್ಟ್ ಕಂಡಿತು. 71 ವರ್ಷದ ಮುಟ್ಟು ನಿಂತ ಮಹಿಳೆ ಮಂಡಿ ನೋವಿಗೆ ವೈದ್ಯರ ಬಳಿಗೆ ಹೋಗಿದ್ದಾಳೆ. ಕಾರ್ಟಿಕೊಸ್ಟೀರಾಯ್ಡ್ ಇಂಜೆಕ್ಷನ್ ಅನ್ನು ಎಡಗಾಲಿನ ಮಂಡಿಗೆ ನೀಡಿದ್ದರು. ಇಂಜೆಕ್ಷನ್ ಕೊಟ್ಟ ಎಷ್ಟೋ ದಿನಕ್ಕೆ ಆಕೆಗೆ ರಕ್ತಸ್ರಾವವಾಗಿತ್ತು. ವೈದ್ಯರು ಪ್ರತಿಪಾದಿಸಿದ್ದು 'ಹೊರಗಿನಿಂದ ದೇಹದೊಳಗೆ ಹೊಕ್ಕ 'ಎಕ್ಸೊಜೀನಸ್ ಸ್ಟೀರಾಯ್ಡ್' ದೇಹದೊಳಗೆ ಪರಿಚಲನೆಯಲ್ಲಿರುವ ಹಾರ್ಮೋನ್ ಮಟ್ಟವನ್ನು ಅಡ್ಡಿಪಡಿಸಿದೆ, ಇದರಿಂದಾಗಿ ಮುಟ್ಟು ನಿಂತ ಗರ್ಭಕೋಶದಿಂದ ಅಸಹಜವಾದ ರಕ್ತಸ್ರಾವವಾಗಿದೆ'.

ಮತ್ತೊಂದು ರಿಪೋರ್ಟ್ ಮಸ್ಕಟ್‌ನ ಸುಲ್ತಾನ್ ಕಾಬೂಸ್ ವಿಶ್ವವಿದ್ಯಾಲಯದ ಡಾ. ಗೌರಿ ವೈದ್ಯನಾಥನ್ ಅವರದು. ಭುಜದ ಕೀಲುನೋವಿಗೆ ನೀಡಿದ್ದ ಕಾರ್ಟಿಕೊಸ್ಟೀರಾಯ್ಡ್‌ನಿಂದಾಗಿ 68 ವಯಸ್ಸಿನ ಮಹಿಳೆಯಲ್ಲಿ ರಕ್ತಸ್ರಾವವಾದುದನ್ನು 'ರೇರ್ ಸೈಡ್ ಎಫೆಕ್ಟ್' ಎಂಬುದಾಗಿ ಉಲ್ಲೇಖಿಸಿದ್ದರು.

## ಸಮಗ್ರ ಅಧ್ಯಯನ

ಈ ಬಿಡಿಬಿಡಿ ಕೇಸ್ ಸ್ಟಡಿಗಳಲ್ಲದೆ, ಯಾರಾದರೂ ಹೆಚ್ಚಿನ ಸಂಖ್ಯೆಯ ಮಹಿಳೆಯರ ಮೇಲೆ ಕಾರ್ಟಿಕೊಸ್ಟೀರಾಯ್ಡ್‌ನ ಪರಿಣಾಮದ ಸಮಗ್ರ ಅಧ್ಯಯನ ನಡೆಸಿದ್ದಾರೆಯೇ ಎಂದು ಹುಡುಕಿದೆ. ಅಂತಹ ಸಂಶೋಧನಾ ಲೇಖನಗಳೂ ದೊರೆತವು. ಸ್ತ್ರೀರೋಗ ಕ್ಯಾನ್ಸರ್ ತಜ್ಞೆ (ಗೈನ್ ಆಂಕೊಲಾಜಿಸ್ಟ್) ಡಾ. ಎಲಿಜಬೆತ್ ಸೂ ಬರ್ಗ್ಮನ್ ಅವರ ಇಸವಿ 2016ರ ಸಂಶೋಧನಾ ಲೇಖನ 'ಪ್ರಾಸ್ಪೆಕ್ಟಿವ್ ಕೇಸ್‌ಕಂಟ್ರೋಲ್ ಸ್ಟಡಿ ಆಫ್ ಅಬ್‌ನಾರ್ಮಲ್ ಬ್ಲೀಡಿಂಗ್ ಆಫ್ಟರ್ ಔಟ್‌ಪೇಷೆಂಟ್ ಕಾರ್ಟಿಕೊಸ್ಟೀರಾಯ್ಡ್ ಇಂಜೆಕ್ಷನ್' ಸಿಕ್ಕಿತು. 244 ಮುಟ್ಟು ನಿಂತ ಮಹಿಳೆಯರಿಗೆ ಕಾರ್ಟಿಕೊಸ್ಟೀರಾಯ್ಡ್ ಇಂಜೆಕ್ಷನ್ ಕೊಟ್ಟಾಗ, ಶೇಕಡಾ 17ರಷ್ಟು ಮಹಿಳೆಯರಲ್ಲಿ ಅಸಹಜವಾದ ರಕ್ತಸ್ರಾವವಾದದ್ದನ್ನು ತಿಳಿಸಿತ್ತು.

ನೆದರ್‌ಲೆಂಡ್‌ನ ಡಾ. ಹೆನ್ನಿ ಆನಾ ರಿಯೇ ಕ್ಲಾಂಪ್, ಡಾ. ಯೊಹಾನಸ್ ಮರಿಯ ಜೂಲಿಯಮಸ್, ಡಾ. ಪಾಲ್ ಯಾನ್ ಕೊರಿಯೆನ್ ಮತ್ತು ವಾನ್ ಡೆರ್ ಲಿಂಡೆನ್ ಅವರ ಮತ್ತೊಂದು ಸಂಶೋಧನಾ ಲೇಖನ, 83 ಮಂದಿ ಮುಟ್ಟು ನಿಂತ ಮಹಿಳೆಯರಿಗೆ ಕಾರ್ಟಿಕೊಸ್ಟೀರಾಯ್ಡ್ ಇಂಜೆಕ್ಷನ್ ಕೊಟ್ಟಾಗ, 15 ಮಹಿಳೆಯರಲ್ಲಿ ರಕ್ತಸ್ರಾವ ಉಂಟಾಯಿತು ಎಂದು ತಿಳಿಸಿತ್ತು. ಅಂದರೆ ಶೇಕಡ 18. ಶೇಕಡ 17 ಅಥವಾ 18 'ಅನ್‌ಕಾಮನ್' ಸೈಡ್ ಎಫೆಕ್ಟ್ ಹೇಗಾಗಬಲ್ಲವು? ಆದರೂ ಇದನ್ನು ಎಲ್ಲರೂ 'ಅಪರೂಪದ್ದು' ಎಂದು ಭಾವಿಸಿದಂತಿದೆ. ಇಂಜೆಕ್ಷನ್ ಚುಚ್ಚುವ ವೈದ್ಯರೂ ಎಚ್ಚರಿಸುತ್ತಿದ್ದಂತಿಲ್ಲ, ಔಷಧ ಕಂಪನಿಗಳೂ ಎಚ್ಚರಿಸುತ್ತಿಲ್ಲ.

'ಅದೆಲ್ಲ ಸರಿ, ಆದರೆ ನನಗೆ ಇಂಜೆಕ್ಷನ್ ಚುಚ್ಚಿದ ಎರಡು ವಾರಕ್ಕೆ ಕಾಣಿಸಿಕೊಂಡದ್ದು. ಇದು ಅಡ್ಡಪರಿಣಾಮ ಎಂದು ಕನಸು ಕಾಣಬೇಡ' ಎಂದು ಮನಸ್ಸು ಎಚ್ಚರಿಸಿತು.

## 17 ಜುಲೈ 2023 ಬಯಾಪ್ಸಿ ರಿಪೋರ್ಟ್

ಕಡೆಗೂ ಏಳು ದಿನಗಳು ಕಳೆದವು, ಇಂದು ಬಯಾಪ್ಸಿ ರಿಪೋರ್ಟ್ ಸಿಗಲಿತ್ತು. ಮತ್ತೆ ಕ್ಲಿನಿಕ್‌ಗೆ ಬಂದೆ. ಲ್ಯಾಬ್‌ಗೆ ಹೋದಾಗ ಎದೆ ಡವಗುಟ್ಟುತ್ತಿತ್ತು. ಎಂಡೊಮೆಟ್ರಿಯಲ್ ಬಯಾಪ್ಸಿ ರಿಪೋರ್ಟ್ ಕೈಗೆ ಬಂದಿತು, ಅಲ್ಲಿ 'ಸೆಕ್ಷನ್ಸ್ ಆರ್ ನೆಗೆಟಿವ್ ಫಾರ್ ಎಟಿಪಿಯಾ ಆರ್ ಮ್ಯಾಲಿಗ್ನೆನ್ಸಿ' ಎಂದಿತ್ತು! 'ನೆಗೆಟಿವ್ ಫಾರ್ ಮ್ಯಾಲಿಗ್ನೆನ್ಸಿ' ಅಂದರೆ ಕ್ಯಾನ್ಸರ್ ಇಲ್ಲ. ಈಗ ಡಾ. ನಳಿನಿ ಅವರ ಮುಂದೆ ಕುಳಿತಿದ್ದೆ. ಕೂಲಂಕಷವಾಗಿ ಗಮನಿಸಿದ ಅವರು ಮುಗುಳ್ನಗುತ್ತಾ 'ಚಿಂತೆ ಮಾಡುವಂತಹುದೇನೂ ಇಲ್ಲ, ಮ್ಯಾಗ್ನೆನ್ಸಿ ಇಲ್ಲ' ಎಂದರು. 'ಮೇಡಂ, ಎಟಿಪಿಯಾ ಅಂದರೇನು' ಕೇಳಿದೆ. 'ಸಾಮಾನ್ಯವಲ್ಲದ ಅಸಾಮಾನ್ಯವಾದದ್ದು, ಅಂದರೆ ಕ್ಯಾನ್ಸರ್ ಕೋಶಗಳಂಥದ್ದು ಇಲ್ಲವೆಂದು ರಿಪೋರ್ಟ್ ಹೇಳಿದೆ'. ಮನಸ್ಸು ನಿರಾಳವಾಯಿತು.

ಈಗ ಅವರಲ್ಲಿ ನನಗೆ ಕೊಟ್ಟ ಆ ಇಂಜೆಕ್ಷನ್ ಕತೆ ಹೇಳಿದೆ. 'ಮ್ಯಾಡಂ, ನನಗೆ ಸೋಂಕು ಇಲ್ಲ, ಕ್ಯಾನ್ಸರ್ ಇಲ್ಲ. ಆದರೂ ರಕ್ತಸ್ರಾವವಾಯಿತು.




